# ಹೆಂಡತಿಯೆಂಬ ತಾಯಿ!

ಹೆಂಡತಿಯನ್ನು 'ಗೃಹ ದೇವತೆ', 'ಮನೆ ಮನೆಯ ಸರಸ್ವತಿ' ಮುಂತಾಗಿ ಕರೆದು ಕೀರ್ತಿಸುವುದು ಅಷ್ಟು ಸಮಂಜಸವಲ್ಲ. ಏಕೆಂದರೆ 'ದೇವತೆ'ಯೆಂದು ಕರೆಯುತ್ತಲೇ ಅವಳನ್ನು ಅತ್ತೆ ಮಾವ ಮೈದುನ ಬಾವ ಗಂಡ ಮಕ್ಕಳಾದಿಯಾಗಿ ಎಲ್ಲರೂ ನಯವಾಗಿ ದುಡಿಸಿಕೊಳ್ಳುವುದನ್ನು ನಾವು ಮನೆ ಮನೆಗಳಲ್ಲಿ ಕಂಡಿದ್ದೇನೆ. ಅವಳು ಸದಾ ದುಡಿಯುವ ಹಸುವಿನಂತೆ ಇದ್ದುಬಿಟ್ಟಿದ್ದಾಳೆ. ನಮ್ಮ ಸಮಾಜ ತಲ ತಲಾಂತರದಿಂದಲೂ ಅವಳನ್ನು ಆ ರೀತಿಯೇ ಬೆಳೆಸಿದೆ. ತಾಯಿಯನ್ನು ನೋಡಿ ಮಗಳು ಕಲಿಯುತ್ತಾಳೆ; ಅತ್ತೆಯ ಗುಣಗಳನ್ನು ಸೊಸೆ ಮುಂದುವರಿಸುತ್ತಾಳೆ. ಸಂಸಾರಕ್ಕಾಗಿ ದುಡಿಯುವುದನ್ನು ಅವಳು ಎಷ್ಟರಮಟ್ಟಿಗೆ ಮೈಗೂಡಿಸಿಕೊಂಡಿದ್ದಾಳೆಂದರೆ, ಆ ದುಡಿಮೆಯಲ್ಲಿ ಅಕಸ್ಮಾತ್ ಬೇರೆಯವರು ಕೈಜೋಡಿಸಿದರೆ ತನ್ನ ಹಕ್ಕಿನ ಉಲ್ಲಂಘನೆಯಾಯಿತೆಂದು ಭಾವಿಸಿಬಿಡುತ್ತಾಳೆ! ಅದು ಅವಳ ವಂಶವಾಹಿಗಳಲ್ಲಿ ಸೇರಿಬಿಟ್ಟಿರುವ ಹಾಗೆ ತೋರುತ್ತದೆ. ಈ ದುಡಿಮೆಯ-ಗಂಡಿನ ನಯವಾದ ಬಂಧನದ ಬಿಡುಗಡೆಯನ್ನು ಅವಳು ಬೌದ್ಧಿಕ-ಪ್ರಜ್ಞಾಪೂರ್ವಕ ಎಚ್ಚರದ ಮೂಲಕ ಬಿಡಿಸಿಕೊಳ್ಳಬೇಕಾಗಿದೆ.

ಈ ಬಿಡುಗಡೆ ಸಾಂಪ್ರದಾಯಿಕ ಶಿಕ್ಷಣದಿಂದ ಸಾಧ್ಯವಾಗದೆಂಬುದು ಈಗಾಗಲೇ ಅನುಭವ ವೇದ್ಯವಾಗಿದೆ. ಸಾಂಪ್ರದಾಯಿಕ- ರೂಢಿಗತ ಶಿಕ್ಷಣ ವ್ಯವಸ್ಥೆ ಅವಳನ್ನು-ಸ್ತ್ರೀಯನ್ನು- ಅಕ್ಷರಸ್ಥಳನ್ನಾಗಿ ಮಾಡುತ್ತಿದೆಯಷ್ಟೆ. ವೈಚಾರಿಕವಾಗಿ ಲಿಂಗಸಮಾನತೆಯ ಪರವಾಗಿ ಚಿಂತಿಸಿ ಹಕ್ಕೊತ್ತಾಯ ಮಾಡುವಂಥ ಬೌದ್ಧಿಕ ವಿಕಾಸವನ್ನು ನೀಡುವ ಹೊಸ ಬಗೆಯ ಶಿಕ್ಷಣ ಕ್ರಮವನ್ನು ಅವಳು ಅನ್ವೇಷಿಸಬೇಕಾಗಿದೆ. ರೂಢಿಗತ ಶಿಕ್ಷಣ- ಪದವಿಗಳು ಅವಳಿಗೆ ಆರ್ಥಿಕ ಸ್ವಾತಂತ್ರ್ಯವನ್ನೂ, ಹೊಸ್ತಿಲ ಹೊರಗಿನ ಬೆಳಕನ್ನು ನೀಡಿರುವುದರಲ್ಲಿ ಸಂಶಯವಿಲ್ಲ. ಅವು ಅವಳಿಗೆ ತನ್ನ ಮನಸ್ಸಿಗೆ ಅನಿಸಿದ್ದನ್ನು ಕೊಳ್ಳುವ- ಅದರಲ್ಲಿ ಸುಖಿಸುವಷ್ಟರ ಮಟ್ಟದ ಅವಕಾಶವನ್ನು ನೀಡಿವೆ. ಆದರೆ ಅವಳ ಮನೆಯೊಳಗಿನ ದುಡಿಮೆ, ಗಂಡಸನ್ನು ಪರಿಭಾವಿಸುವ ರೀತಿ, ತನ್ನನ್ನು ತಾನು ಸ್ಥಾನೀಕರಿಸಿಕೊಳ್ಳುವ ಬಗೆ ಬದಲಾಗಿಲ್ಲ. ಒಂದು ಪಕ್ಷ ಸಾಂಪ್ರದಾಯಿಕ ಸ್ತ್ರೀಯ ಅಸ್ತಿತ್ವವನ್ನು ಪರಿವರ್ತಿಸಬೇಕೆಂದು ಹೋರಾಡುವ ಸ್ತ್ರೀ ಪ್ರಜ್ಞೆ ಮೂಡಿಸಿಕೊಂಡ ಮಹಿಳಾ ಹೋರಾಟಗಾರ್ತಿಯರನ್ನು ನಿಕೃಷ್ಟವಾಗಿ ನೋಡುವ ಮನೋಪ್ರವೃತ್ತಿಯಿದೆ.

'ಗಂಡ' 'ಹೆಂಡತಿ' ಎಂಬುವ ಸಂಬಂಧ ವಾಚಕಗಳು ಒಂದು ಸಾಮಾಜಿಕ-ಭಾಷಿಕ ನೆಲೆಯಲ್ಲಿ ಬಳಸುವ ಪದಗಳಾಗಿವೆ. ಇವು ಸಮಾಜದಿಂದ ಸಮಾಜಕ್ಕೆ ಬೇರೆಯ ರೀತಿಯಲ್ಲಿ ಉಚ್ಚಾರಣೆಗೊಂಡರೂ ಸ್ಫುರಿಸುವ ಅರ್ಥವೊಂದೇ. ಆದರೆ ನಮ್ಮಲ್ಲಿ, ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿರುವ ಲಿಂಗ ತಾರತಮ್ಯದ ಕಾರಣದಿಂದ ಬಹುಪಾಲು ಹೆಂಡತಿಯರು ತಮ್ಮ ಗಂಡಂದಿರನ್ನು 'ಗಂಡ'ನೆಂದು ಇತರರಿಗೆ ಪರಿಚಯಿಸುವುದಿಲ್ಲ. ಅವರು 'ಯಜಮಾನ'ನ ಸ್ಥಾನವನ್ನು ಅಲಂಕರಿಸುತ್ತಾನೆ. ಅವಳಿಗೆ ಅವನು ಆಗಬೇಕಾಗಿರುವುದು ಗಂಡನೇ ಹೊರತು 'ಯಜಮಾನ'ನಾಗಿಯಲ್ಲ. 'ಯಜಮಾನ'ನೆಂದಾಕ್ಷಣ ಇವಳು ಕೆಳಗಿನ ಸ್ಥಾನಕ್ಕಿಳಿಯುತ್ತಾಳೆ. ಸೇವಕಿ ಅಥವಾ ಕೆಲಸಗಾರ್ತಿಯಾಗುತ್ತಾಳೆ. ಆದರೆ 'ಗಂಡ' 'ಹೆಂಡತಿ' ಎಂಬ ಪದಗಳು ಸಮಾನ ಸ್ಥಾನಮಾನವನ್ನು ಸೂಚಿಸುವ ಪದಗಳು. ಆ ಪದಗಳು ಸೂಚಿಸುವ ಸ್ಥಾನಗಳಿಗೆ ಅವುಗಳದೇ ಆದ ಘನತೆ ಇದ್ದೇ ಇದೆ. ಆ ಘನತೆಯನ್ನು 'ಯಜಮಾನ'ನೆಂದು ಕರೆದು ಕಡಿಮೆ ಮಾಡಿಕೊಳ್ಳಬಾರದು.

ಭಾರತೀಯ ಸಮಾಜದಲ್ಲಿ ಇಂದಿಗೂ ಹೆಣ್ಣಿನ ದುಡಿಮೆಗೆ ಬೆಲೆ ಕಟ್ಟಲಾಗದು. ಅವಳದೊಂದು ನಿಸ್ವಾರ್ಥ ಕಾಯಕ. ತಾನು ಹುಟ್ಟಿ ಬೆಳೆದ ಆವರಣದಿಂದ ಬೇರ್ಪಟ್ಟು, ಸಂಪೂರ್ಣ ಹೊಸದಾದ ಆವರಣದಲ್ಲಿ, ಅಭಿರುಚಿಯ ನಡುವೆ, ನವನವೀನ ಮನಸ್ಥಿತಿಗಳ ಒಡನೆ ತನ್ನ ಬದುಕನ್ನು ಕಟ್ಟಿಕೊಂಡು ಅಸ್ತಿತ್ವ ಸ್ಥಾಪಿಸುವ ಬಗೆಯೇ ರೋಮಾಂಚನಕಾರಿಯಾದುದು ಮತ್ತು ನಿಗೂಢವಾದುದು. ತನ್ನನ್ನು ತಾನು ತನ್ನ ಗಂಡ ಮತ್ತು ಮಕ್ಕಳ ಶ್ರೇಯಸ್ಸಿಗಾಗಿ ಅರ್ಪಿಸಿಗೊಂಡು, ತನ್ನತನವನ್ನು ಅವರ ಹಿರಿಮೆ ಗರಿಮೆಗಳಲ್ಲಿ ಇಲ್ಲವಾಗಿಸಿಕೊಳ್ಳುವ ರೀತಿ ಬೆರಗು ಮೂಡಿಸುವಂಥದು. ಅವಳು ಕೇವಲ ತನ್ನ ಮಕ್ಕಳಿಗೆ ಮಾತ್ರ ತಾಯಿಯಾಗುವುದಿಲ್ಲ. ಅವಳು ತನ್ನ ಗಂಡನಿಗೂ ತಾಯಿಯಾಗಿ ಅವನನ್ನು ಪೋಷಿಸುತ್ತಾಳೆ.

ನಮ್ಮ ಗ್ರಾಮೀಣ ಸಂಸ್ಕೃತಿಯಲ್ಲಿ ಹೆಂಡತಿಯನ್ನು 'ಚಿಕ್ಕಮ್ಮ'ನೆಂದು ಗುರುತಿಸುವ ವಾಡಿಕೆಯಿದೆ. ಇದೊಂದು ಅನುಭವ ಜನ್ಯವಾದ ಪರಿಭಾವನೆ. ಒಂದು ಸಮಾಜವು ತನ್ನ ಮಡಿಲಿಗೆ ಅನ್ಯ ಕುಟುಂಬದಿಂದ ಬಂದ ಹೆಣ್ಣುಮಗಳೊಬ್ಬಳು ಬಂದ ಕುಟುಂಬದ ಏಳಿಗೆಗಾಗಿ ದುಡಿಯುವ ರೀತಿಯನ್ನು ಲಿಂಗ ಅಸಮಾನತೆಯ ನಡುವೆಯೂ ಗುರುತಿಸಿದೆ. ಎಲ್ಲೋ ಅವಳನ್ನು ದುಡಿಸಿಕೊಂಡಿರುವ ರೀತಿಗೆ, ಅವಳ ಮೇಲೆ ಎಸಗಿರುವ ಶ್ರಮದ ಕ್ರೌರ್ಯಕ್ಕೆ ಗಂಡಿಗೆ, ಸಿಗ್ಗಾಗಿರಬೇಕು. ಅವಳ ಮುಂದೆ ತನ್ನ ದುಡಿಮೆ-ತ್ಯಾಗಗಳು ಕಡಿಮೆಯೆಂಬ ಪ್ರಜ್ಞೆ ಕಾಡಿರಬೇಕು. ಅದಕ್ಕಾಗಿ ಅವಳನ್ನು ಹೆಂಡತಿಯ ಸ್ಥಾನದಿಂದ ತಾಯಿಯ ಸ್ಥಾನಕ್ಕೇರಿಸಿ ವೈಭವೀಕರಿಸುವ ಮನಸ್ಸು ಮಾಡಿರಬೇಕು. ತನ್ಮೂಲಕ ತನಗಾಗಿರುವ ನಾಚಿಕೆಯನ್ನು ಮುಚ್ಚಿಕೊಳ್ಳಲೆತ್ನಿಸುವ ಹುನ್ನಾರವಾಗಿರಬಹುದೇ?

■ ಶಿಕಾಕು

## ಮಾತೇ ಮುತ್ತು

★ ಮನೆ ನಿಂತಿರುವುದು ಮಡದಿಯಿಂದ, ಬಿದ್ದರೆ ಗಂಡನ ತಲೆ ಮೇಲೆ!

-ಬೀಚಿ

★ ಯಾರು ಯಾರ ಪ್ರೀತಿಗೆ ಪಾತ್ರರೋ ಅವರು ಏನನ್ನು ಮಾಡದೇ ಇದ್ದರೂ, ಕೇವಲ ಸಾಮಿಪ್ಯ ದಿಂದಲೇ ದುಃಖವನ್ನು ಹೋಗಲಾಡಿಸುತ್ತಾರೆ. ಅದೇ ಪ್ರೀತಿಯಲ್ಲಿರುವ ಮಹತ್ತರವಾದ ಗುಣ.

-ಉತ್ತರರಾಮ ಚರಿತ

★ ಅಜ್ಞಾನಿ ತನಗೆ ತಿಳಿಯದುದನ್ನು ಯಾವಾಗಲೂ ಗೌರವಿಸುತ್ತಾನೆ.

-ಸಿ.ಲಾಂಬ್ರೋಸ್

★ ಅಜ್ಞಾನ ಎಂದೂ ಯಾವ ಪ್ರಶ್ನೆಯನ್ನೂ ಬಗೆಹರಿಸುವುದಿಲ್ಲ.

-ಬೆಂಜಮಿನ್ ಡಿಸ್ರೇಲಿ

★ ಪ್ರತಿಯೊಂದು ಅಡಚಣೆಯೂ ಒಂದು ಸವಾಲು. ಅದನ್ನು ಒಪ್ಪಿದಲ್ಲಿ ಒಂದು ಅವಕಾಶ; ಅನೇಕ ಅವಕಾಶಗಳು ಬರುವುದೇ ಹೀಗೆ.

-ಎ.ಡಿ.ರೀಚೆ

★ ಅಜ್ಞಾನ ಅತ್ಯಂತ ಕೀಳೆನಿಸಿಕೊಳ್ಳುವುದು ಐಶ್ವರ್ಯದೊಡನಿದ್ದಾಗಲೇ.

-ಪೋಪೆನ್‌ಹಾರ್

★ ಸುಖಗಳನ್ನನುಭವಿಸುವ ಆಸೆ ನಿಂತಿದೆ. ಗಂಡಸೆಂಬ ಗೌರವವು ಹೋಯಿತು. ಪ್ರಾಣ ಸ್ನೇಹಿತರೆಲ್ಲಾ ಸ್ವರ್ಗಸ್ಥರಾದರು. ಕೋಲು ಹಿಡಿದುಕೊಂಡು ಏಳುವ ಸ್ಥಿತಿ ಬಂದಿದೆ. ಎರಡು ಕಣ್ಣುಗಳು ದಟ್ಟವಾದ ಕತ್ತಲಿನಿಂದ ಕೂಡಿವೆ. ಆದರೂ ಈ ಮೊಂಡ ಶರೀರ ಸಾವಿನ ಹೆದರಿಕೆಯಿಂದ ತಲ್ಲಣಿಸುತ್ತಿದೆಯಲ್ಲಾ ಎಂಬುದೇ ಸಂಕಟಕರ.

-ವೈರಾಗ್ಯ ಶತಕ

★ ತಾನು ಅಕ್ರಮ ಮಾಡಿದ ನಂತರ ಪಶ್ಚಾತ್ತಾಪ ಪಟ್ಟು ತನ್ನ ಕರ್ಮಗಳಲ್ಲಿ ಸುಧಾರಣೆ ತಂದರೆ ನಿಶ್ಚಯವಾಗಿಯೂ ಅವನ ಪಶ್ಚಾತ್ತಾಪವನ್ನು ಅಲ್ಲಾಹನು ಸ್ವೀಕರಿಸುವನು. ಅಲ್ಲಾಹನು ಅತ್ಯಧಿಕ ಕ್ಷಮಾಶೀಲನೂ, ಕರುಣಾನಿಧಿಯೂ ಆಗಿರುತ್ತಾನೆ.

-ಕುರಾನ್

★ ಎಲ್ಲದರಲ್ಲಿಯೂ ಮಿತವಾಗಿರಬೇಕೆಂಬುದೇ ನಮ್ಮ ಮುಖ್ಯ ನೀತಿ ಸೂತ್ರ. ಯಾವುದರಲ್ಲಿಯೂ -ಗುಣದಲ್ಲಿ ಸಹ- ಅತಿ ಆಗಬಾರದು.

-ಜೇಮ್ಸ್ ಹಿಲ್ಟನ್

★ ಅತ್ತೆ ಗಂಡನ ತಾಯಿ. ಹೆಂಡತಿಯ ದೆವ್ವ!

-ಜರ್ಮನಿ ಗಾದೆ

★ ಕೊಂಡ ದಿನ ಅತ್ತೆ, ಕೂಡಿದ ದಿನ ತಾಯಿ.

-ಗಾದೆ

★ ಮೂರ್ಖರು ಬಾಲ್ಯವನ್ನು ಆಟದಲ್ಲಿಯೂ, ತಾರುಣ್ಯವನ್ನು ವಿಷಯ ಸುಖಗಳಲ್ಲಿಯೂ, ಮುದಿತನವನ್ನು ಶಕ್ತಿಯಿಲ್ಲವೆಂದೂ ಕಳೆಯುತ್ತಾರೆ.

-ವಿಷ್ಣು ಪುರಾಣ

★ ಸಂಸಾರವು ದುಃಖದಿಂದ ತುಂಬಿದೆ. ಸಂಸಾರವುಳ್ಳವನು ದುಃಖಿತ! ಅದನ್ನು ಬಿಟ್ಟವನು ಸುಖಿ! ಬೇರೆ ಯಾರೂ ಸುಖವನ್ನು ಪಡೆಯಲಾರ!

-ಗರುಡ ಪುರಾಣ